**<u>ದಿನಾಂಕಃ 02-08-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.</u>**

***<u>ಪಾಟೀ ಸವಾಲುಃ ಶ್ರೀ ಬಿ.ಜಿ.ಕೆ. ವಕೀಲರಿಂದ 3 ಮತ್ತು 4 ನೇ ಪ್ರತಿವಾದಿ ಯರ ಪರವಾಗಿಃ-</u>***

ಅನಂತರಾಮ್ ಎಂಬುವವರಿಗೆ ಒಬ್ಬ ಹೆಣ್ಣು ಮತ್ತು ಒಬ್ಬ ಗಂಡು ಮಕ್ಕಳು ಎಂದರೆ ಸರಿಯಲ್ಲ, ಎರಡು ಹೆಣ್ಣು ಮತ್ತು ಒಬ್ಬ ಗಂಡು ಮಗ ಎನ್ನುತ್ತಾರೆ. ಸದರಿ ಅನಂತರಾಮ್ ರವರಿಗೆ ಇಬ್ಬರು ಹೆಂಡತಿಯರು ಎಂದರೆ ಸಾಕ್ಷಿಯು ಇಲ್ಲ ಮೂವರು ಎನ್ನುತ್ತಾರೆ. ಅವರ ಮೊದಲನೆ ಮತ್ತು ಎರಡನೇಯ ಹೆಂಡತಿಯವರ ಹೆಸರು ಗೊತ್ತಿಲ್ಲ, ಮೂರನೆ ಹೆಂಡತಿಯ ಹೆಸರು ಶ್ರೀಮತಿ ಸುನ್ನಮ್ಮ ಎನ್ನುತ್ತಾರೆ. ಸದರಿ ಸುನ್ನಮ್ಮ ರವರ ಮಗ ರಾಜರಾಮ್ ಎಂದರೆ ಸರಿ. ಸದರಿ ಅನಂತರಾಮ್ ರವರ ಮೊದಲನೆಯ ಹೆಂಡತಿಯ ಹೆಸರು ಸುಭದ್ರಾಬಾಯಿ ಎಂದರೆ ಸರಿಯಲ್ಲ ಮತ್ತು ಇವರಿಬ್ಬರ ಮಗಳು ನರಸಮ್ಮ ಎಂದರೆ ಸರಿಯಲ್ಲ. ನರಸಮ್ಮಳ ತಾಯಿಯ ಹೆಸರು ಗೊತ್ತೇ ಎಂದರೆ ಸಾಕ್ಷಿ ಸುನ್ನಮ್ಮ ಎನ್ನುತ್ತಾರೆ. ನರಸಮ್ಮಳು ಸುನ್ನಮ್ಮಳ ಮಗಳು ಎಂಬ ಬಗ್ಗೆ ದಾಖಲೆ ಸಲ್ಲಿಸಿಲ್ಲ.

ಮೂಲ ವಾದಿ- ಅನುಸೂಾಯಬಾಯಿ ಸದರಿ ಅನಂತರಾಮ್ ಮತ್ತು ಸುನ್ನಮ್ಮ ರವರ ಮಗಳು ಎಂಬುವುದರ ಬಗ್ಗೆ ದಾಖಲೆ ಸಲ್ಲಿಸಿಲ್ಲ. ಮೂಲ ವಾದಿ- ಅನುಸೂಾಯಬಾಯಿ ರಾಯಚೂರಿನಲ್ಲಿ ವಾಸವಾಗಿರಲಿಲ್ಲ, ಕಲಬುರಗಿಯಲ್ಲಿ ವಾಸವಾಗಿದ್ದರು ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳಲ್ಲಿ ಮೂಲ ವಾದಿಯು 50 ವರ್ಷಗಳಿಂದ ಸ್ವಾಧೀನಾನುಭವದಲ್ಲಿ ಇರಲಿಲ್ಲ ಎಂದರೆ ಸುಳ್ಳು. ದಾವಾ ಸ್ವತ್ತುಗಳಿಗೂ ಮೂಲ ವಾದಿಗೂ ಯವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ.

1 ಮತ್ತು 2 ನೇ ಪ್ರತಿವಾದಿಯ ತಂದೆ ಭವಾನಿ ಸಿಂಗ್ ರವರಿಗೂ ಮತ್ತು ಮೂಲ ವಾದಿಗು ಯಾವುದೇ ಸಂಬಂಧ ಇಲ್ಲ ಎಂದರೆ ಸಾಕ್ಷಿಯು ದೂರದ ಸಂಬಂಧಿ ಎನ್ನುತ್ತಾರೆ. ಯಾವ ರೀತಿಯ ದೂರದ ಸಂಬಂಧಿ ಎಂದರೆ ಹೇಳಲಾಗುವುದಿಲ್ಲ ಎನ್ನುತ್ತಾರೆ. ದಾವಾ ಸ್ವತ್ತಿನ ಕ್ರಮ ಸಂಖ್ಯೆ 3 ಸ್ವತ್ತು ಮೇಲ್ಕಂಡ ಭವಾನಿ ಸಿಂಗ್ ರವರಿಗೆ ಸೇರಿದ್ದು ಎಂದರೆ ಸರಿಯಲ್ಲ, ಸಾಕ್ಷಿಯು ಮುಂದುವರೆದು ಸದರಿ ಭವಾನಿ ಸಿಂಗ್ ಅಕ್ರಮವಾಗಿ ಖಾತೆ ಮಾಡಿಸಿಕೊಂಡಿದ್ದರು ಎನ್ನುತ್ತಾರೆ. ನಿಪಿ-3 ರ ಪ್ರಕಾರ

ದಾವಾ ಸ್ವತ್ತಿನ ಕ್ರಮಸಂಖ್ಯೆ 3 ರ ಸ್ವತ್ತು ಸದರಿ ಭವಾನಿ ಸಿಂಗ್ ರವರ ಖಾತೆಯಲ್ಲಿ ಇದೆಯೆಂದರೆ ಸಾಕ್ಷಿಯು ಅದನ್ನು ಅಕ್ರಮವಾಗಿ ಸೃಷ್ಠಿಸಲಾಗಿದೆ ಎನ್ನುತ್ತಾರೆ . ದಾವಾ ಸ್ವತ್ತಿನ ಕ್ರಮ ಸಂಖ್ಯೆ 3 ರ ಸ್ವತ್ತು ಮೂಲ ವಾದಿ ಅಥವಾ ಮತ್ತು ಅವರ ಕುಟುಂಬದವರ ಹೆಸರಿನಲ್ಲಿದ್ದ ಬಗ್ಗೆ ದಾಖಲೆ ಸಲ್ಲಿಸಿಲ್ಲ ಎಂದರೆ ಸರಿ, ಸಾಕ್ಷಿಯು ಮುಂದುವರೆದು 1980 ಕ್ಕು ಮೊದಲಿನ ದಾಖಲೆಗಳು ನಗರ ಸಭೆಯಲ್ಲಿ ಇಲ್ಲ ಎನ್ನುತ್ತಾರೆ. ಆ ರೀತಿ ನಗರ ಸಭೆಯಲ್ಲಿ ಇರದಿರುವ ಬಗ್ಗೆ ದಾಖಲೆ ಸಲ್ಲಿಸಿಲ್ಲ. ಸದರಿ ಭವಾನಿ ಸಿಂಗ್ ರವರಿಗೆ 5 ಜನ ಮಕ್ಕಳು, ಅವರು 1 ನೇ ಪ್ರತಿವಾದಿ, ಬಾಲಾಜಿ ಸಿಂಗ್, 3 ನೇ ಮಗನ ಹೆಸರು ನೆನಪಿಲ್ಲ, ಹೀರಾಸಿಂಗ್ ಮತ್ತು 2 ನೇ ಪ್ರತಿವಾದಿ. ಸದರಿ ಬಾಲಾಜಿ ಸಿಂಗ್, ಹೆಸರು ಗೊತ್ತಿಲ್ಲದ ಮೂರನೆ ಮಗ ಮತ್ತು ಹೀರಾ ಸಿಂಗ್ ಇವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿಸಿಲ್ಲ ಎಂದರೆ ಸಾಕ್ಷಿಯು ಅವರು ಮರಣ ಹೊಂದಿದ್ದರು ಅದಕ್ಕೆ ಎನ್ನುತ್ತಾರೆ. ಸದರಿ ಬಾಲಾಜಿ ಸಿಂಗ್, ಹೆಸರು ಗೊತ್ತಿಲ್ಲದ ಮೂರನೆ ಮಗ ಮತ್ತು ಹೀರಾ ಸಿಂಗ್ ಇವರು ಹೆಂಡತಿ ಮಕ್ಕಳು ಬದುಕ್ಕಿದ್ದಾರೆಂದರೆ ಗೊತ್ತಿಲ್ಲ. ಮೇಲ್ಕಂಡ ಭವಾನಿ ಸಿಂಗ್ 3 ನೇ ಪ್ರತಿವಾದಿ ನಿಪಿ-10 ಕ್ರಯ ಪತ್ರ ಮಾಡಿಕೊಟ್ಟಿದ್ದಾರೆಂದರೆ ಸಾಕ್ಷಿಯು ಅದು ಮೂಲ ವಾದಿಗೆ ತಿಳಿಯದಂತೆ ಸೃಷ್ಠಿಸಿದ್ದು ಎನ್ನುತ್ತಾರೆ. ನಿಪಿ-10 ರ ಪ್ರಕಾರ 3 ನೇ ಪ್ರತಿವಾದಿ ಖಾತೆ ಮಾಡಿಕೊಂಡು ಕಂದಾಯ ಕಟ್ಟುತ್ತಾ ಸ್ವಾಧಿನಾನುಭವ ಹೊಂದಿದ್ದಾರೆಂದರೆ ಸಾಕ್ಷಿಯು ಸೃಷ್ಠಿತ ನಿಪಿ-10 ರಂತೆ ಮತ್ತು 2013 ರ ನಂತರದಲ್ಲಿ ಎನ್ನುತ್ತಾರೆ. ದಾವಾ ಸ್ವತ್ತಿನ ಕ್ರಮ ಸಂಖ್ಯೆ 3 ರ ಸ್ವತ್ತು ಈ ದಾವದಲ್ಲಿ ಅಳಿಸಿದ ಕ್ರಮ ಸಂಖ್ಯೆ 2 ರ ಸ್ವತ್ತಿಗೆ ಹೊಂದಿಕೊಂಡಿದೆ ಎಂದರೆ ಸಾಕ್ಷಿಯು ಹೌದು ಮತ್ತು ದಾವಾ ಸ್ವತ್ತಿನ ಕ್ರಮಸಂ. 1 ಮತ್ತು 5 ಕ್ಕೂ ಹೊಂದಿಕೊಂಡಿದೆ ಎನ್ನುತ್ತಾರೆ.

ಮುಂದುವರೆದ ಪಾಟೀ ಸವಾಲಿಗೆ ಕಾಲವಾಕಾಶ ಕೋರಿದ್ದು, ನೀಡಲಾಯಿತು.

( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಖ್ತಲೇಖನೆ ಮೇರೆಗೆ ಬೆರಳಚ್ಚುಗಾರ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿರುತ್ತಾರೆ ಮತ್ತು ಅದನ್ನು ಸಾಕ್ಷಿ ಮತ್ತು ಅವರ ಪರ ವಕೀಲರು ನೋಡಿ ತಿಳಿದುಕೊಂಡಿರುತ್ತಾರೆ.)

**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು,**
**ರಾಯಚೂರು.**